**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**
**ಸಕಲೇಶಪುರ**
**C.C.No.82/2023**

| | | |
|---|---|---|
| **ಹೆಸರು** | **ಃ ಸುನೀಲ್** | **CW - 2** |
| **ತಂದೆ / ಗಂಡ ಹೆಸರು** | **ಃ ಕೆ ಸಿ ಸುರೇಶ್** | **PW -1** |
| **ವಯಸ್ಸು** | **ಃ 36 ವರ್ಷ** | |
| **ವೃತ್ತಿ** | **ಃ ಪೋಲೀಸ್ ಪೇದೆ, ಗ್ರಾಮಾಂತರ ಪೋಲೀಸ್ ಠಾಣೆ** | |
| **ವಿಳಾಸ** | **ಃ ಸಕಲೇಶಪುರ** | ದಿನಾಂಕ ಃ **05-01-2026** |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ಜುಲೈ-2021 ರಿಂದ ಇಲ್ಲಿಯವರೆಗೆ ಸಕಲೇಶಪುರ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ನಾನು ಪೋಲೀಸ್ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ.

ದಿಃ 09.10.2022 ರಂದು ನಾನು ಮತ್ತು ಚಾಸಾ-1 ರವರು ಮತ್ತು ಚಾಸಾ-9 ರವರು ಇಲಾಖಾ ಜೀಪ್ ನಲ್ಲಿ ಉದೇವಾರ ಮತ್ತು ಸುಂಡೇಕೆರೆ ಗ್ರಾಮಗಳಲ್ಲಿ ಗಸ್ತು ಕಾರ್ಯ ಮಾಡುತ್ತಿದ್ದಾಗ ಬೆಳಗ್ಗೆ 11.30 ರ ಸಮಯದಲ್ಲಿ ಚಾಸಾ-9 ರವರಿಗೆ ವಾಟೇಹಳ್ಳಿ ಗ್ರಾಮದ ಜಬೀ ಅವರ ತೋಟದಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಹಸುಗಳನ್ನು ಕಡಿಯುತ್ತಿದ್ದಾರೆ ಎಂಬ ಬಾತ್ಮಿ ಬಂದಿದ್ದು, ಅದರಂತೆ ನಾವು ಸುಮಾರು 12-10 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಲಾಗಿ 1ನೇ ಆರೋಪಿಯ ತೋಟದಲ್ಲಿ ಒಂದು ಶೇಡ್ ಇದ್ದು, ಅದರ ಮುಂದೆ 8 ಹಸು ಹಾಗೂ ದನಗಳನ್ನು ಕಟ್ಟಿ ಹಾಕಿದ್ದು, ಪಕ್ಕದಲ್ಲಿದ್ದ ಹಳ್ಳದಲ್ಲಿ ಹೋಗಿ ನೋಡಲಾಗಿ 1ನೇ ಆರೋಪಿ ಮತ್ತು ಇತರ ಇಬ್ಬರು ಹಸುವನ್ನು ಕಡಿಯುತ್ತಿದ್ದು,

ಕಂಡು ಬಂದಿರುತ್ತದೆ. ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಿ ಹೋಗಿದ್ದು ಬೆನ್ನಟ್ಟಿದರೂ ಸಿಕ್ಕಿರುವುದಿಲ್ಲ.

ನಂತರ ಚಾಸಾ-9 ರವರು ಸ್ಥಳದಲ್ಲೇ ದೂರನ್ನು ತಯಾರಿಸಿ ಚಾಸಾ-1 ರವರ ಮೂಲಕ ಠಾಣೆಗೆ ದಾಖಲು ಮಾಡಿ, ಪ್ರಕರಣ ದಾಖಲಾದ ನಂತರ ಪಂಚರನ್ನು ಬರಮಾಡಿಕೊಂಡು ಸ್ಥಳದಲ್ಲಿದ್ದ ಸುಮಾರು 300 ಕೆ.ಜಿ. ಗೋ ಮಾಂಸ ಮತ್ತು ಕೃತ್ಯಕ್ಕೆ ಬಳಸಿದ್ದು ಒಂದು ಚಾಕು, ಒಂದು ಸತ್ತಾರ್, ಒಂದು ಮರದ ತುಂಡು, 2 ಬೈಕ್ಗಳನ್ನು ವಶ ಪಡಿಸಿಕೊಂಡು ಠಾಣೆಗೆ ತಂದಿರುತ್ತೇವೆ. ಪಶು ವೈದ್ಯಾದಿಕಾರಿಗಳನ್ನು ಕರೆಸಿ ಅವರ ಸಮಕ್ಷಮ ಗೋ ಮಾಂಸವನ್ನು ವಶ ಪಡಿಸಿಕೂಂಡಿರುತ್ತೇವೆ. ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಚಾಕು, ತಕ್ಕಡಿ, ಸತ್ತಾರ್, ಮರದ ತುಂಡುಗಳನ್ನು ನೋಡಿ ಗುರುತಿಸಿದ್ದು, ಅವನ್ನು ಕ್ರಮೇಣವಾಗಿ ಮು.ಮಾ1 ರಿಂದ 4 ಎಂದು ಗುರುತಿಸಲಾಯಿತು. ನಾನು ಆರೋಪಿತರನ್ನು ನೋಡಿದರೇ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 3 ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಪಂಚನಾಮೆಗೆ ಚಾಸಾ-3 ಮತ್ತು 4 ರವರ ಸಹಿ ಪಡೆದಿರುತ್ತಾರೆ. ಪಂಚನಾಮೆಯನ್ನು ಮಧ್ಯಾನ 2 ರಿಂದ 4 ಗಂಟೆಯ ವರೆಗೆ ಮಾಡಿರುತ್ತಾರೆ. ನಾನು ಬೈಕ್ ಗಳನ್ನು ನೋಡಿದರೇ ಗುರುತಿಸುತ್ತೇನೆ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ.**

ನಾವು ವಶಪಡಿಸಿಕೊಂಡ ಕೆಎ-02-ಜೆಟಿ-2253 ಮತ್ತು ಕೆಎ-46-ಕೆ-5874 ಆಗಿರುತ್ತವೆ ಎಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಎ.ಪಿ. ವಕೀಲರಿಂದ ಃ

ದಿಃ09.10.2022 ರಂದು ಬೆಳಗ್ಗೆ 8.00 ರಿಂದ ರಾತ್ರಿ 08.00 ರವರೆಗೂ ಕೆಲಸದ ಅವಧಿ ಇರುತ್ತದೆ. ನಾವು ಗಸ್ತು ಕಾರ್ಯಕ್ಕೆ ಹೋದಾಗ ದಿನಚರಿಯಲ್ಲಿ ನಮೂದು ಮಾಡುತ್ತೇವೆ. ನಮ್ಮ ಪಿ.ಎಸ್.ಐ ರವರು ದಿನಚರಿ ನಮೂದು ಮಾಡುತ್ತಾರೆ. ನಾವು ಠಾಣೆಯಿಂದ ಬೆಳಗ್ಗೆ 10-00 ಗಂಟೆಗೆ ನಮ್ಮ ಸರ್ಕಾರಿ ವಾಹನ ಕೆಎ-13-ಜಿ-1287 ವಾಹನದಲ್ಲಿ ಹೊರಟಿರುತ್ತೇವೆ. ಅದರ ಚಾಲಕರು ಯೋಗೇಶ್ ರವರು ಇರುತ್ತಾರೆ. ನಾವು ಸದರಿ ದಿನ ಸುಂಡೇಕೆರೆ ಉದೇವಾರದಲ್ಲಿ ಗಸ್ತು ಕಾರ್ಯ ಮಾಡಿರುತ್ತೇವೆ. ಬೆಳಗ್ಗೆ 11.30ಕ್ಕೆ ನಾವು ಉದೇವಾರದಲ್ಲಿ ಇದ್ದಾಗ ಮಾಹಿತಿ ಬಂದಿರುತ್ತದೆ. ಘಟನಾ ಸ್ಥಳ ನಮಗೆ ಗೊತ್ತಿದ್ದರಿಂದ ಅಲ್ಲಿಗೆ ಹೋಗಿರುತ್ತೇವೆ. ಬಾತ್ಮಿದಾರರು 1ನೇ ಆರೋಪಿಯ ತೋಟದಲ್ಲಿ ಎಂದು ತಿಳಿಸಿದ್ದರಿಂದ ಅಲ್ಲಿಗೆ ಹೋಗಿರುತ್ತೇವೆ. ಸುಂಡೇಕೆರೆಯಿಂದ ಘಟನಾ ಸ್ಥಳ 8-9 ಕಿ.ಮಿ. ದೂರುವಿರುತ್ತದೆ. ಅರೇಹಳ್ಳಿ - ಸಕಲೇಶಪುರ ರಸ್ತೆಯಿಂದ ಸುಮಾರು 150 ಮಿಟರ್ ಅಂತರದಲ್ಲಿ ಆರೋಪಿ ತೋಟ ಇರುತ್ತದೆ. 1 ನೇ ಆರೋಪಿಯ ತೋಟದ ಪಕ್ಕ ಯಾರ ತೋಟ ಇದೆ ಎಂದು ಗೊತ್ತಿಲ್ಲ. 1 ನೇ ಆರೋಪಿಯ ತೋಟದ ಸರ್ವೆ ನಂ. ಮತ್ತು ವಿಸ್ತೀರ್ಣ ಗೊತ್ತಿಲ್ಲ. ಅಲ್ಲಿ ಯಾವ ಕಾಫಿ ಗಿಡಗಳು ಇವೆ ಎಂದು ಗೊತ್ತಿಲ್ಲ. ತೋಟದ ಪೂರ್ವ ದಿಕ್ಕಿನಲ್ಲಿ ಶೆಡ್ ಇರುತ್ತದೆ. ರಸ್ತೆಯಿಂದ ಸುಮಾರು 50 ಮಿಟರ್ ಅಂತರದಲ್ಲಿ 10X25 ಅಡಿಯ ಶೆಡ್ ಇರುತ್ತದೆ. ಅದು ಅಸ್ಬಾಸ್ ಶೀಟ್ ಶೆಡ್ ಆಗಿರುತ್ತದ್ದೆ. ಶೆಡ್ ನಲ್ಲಿ 3 ಭಾಗಗಳು ಇರುತ್ತವೆ. ಅವು ಸುಮಾರು 7X8 ಅಡಿ ಇರುತ್ತವೆ. ಶೆಡ್ ನ ಪಶ್ಚಿಮ ದಿಕ್ಕಿಗೆ 3 ಅಡಿ ಗೋಡೆ ಇತ್ತು. ಪೂರ್ವ ದಿಕ್ಕಿಗೆ ಪೂರ್ಣ ಗೋಡೆ ಇತ್ತು. ಸ್ಥಳದಲ್ಲಿ 6 ಹೆಣ್ಣು ಹಸುಗಳು 2 ಗಂಡು ಹಸುಗಳು ಇದ್ದವು. ಅವುಗಳ ಬಣ್ಣ ನೆನಪಿಲ್ಲ. ಅವುಗಳ ವಯಸ್ಸು ಗೊತ್ತಿಲ್ಲ.

ಮು.ಮಾ ಗಳು ಹಸುಗಳನ್ನು ಕಡಿಯುತಿದ್ದ ಜಾಗದಲ್ಲಿ ಇದ್ದವು, ಮು.ಮಾಗಳ ಮೇಲೆ ಪ್ರಕರಣದ ಸಂಖ್ಯೆ ಮತ್ತು ಸಾಕ್ಷಿದಾರರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ ರೀತಿಯ

ವಸ್ತುಗಳು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. 14ಕೆ.ಜೆ. ಮಾಂಸ ಸುಸುಕಿ ಅಕ್ಸೆಸ್ ಬೈಕ್ ನಲ್ಲಿ ಇತ್ತು. ಅದು ಕೆಎ.02 ನಂಬರ್ನ ಬೈಕ್ ಆಗಿತ್ತು. ಹಳ್ಳ ಉತ್ತರ ದಿಕ್ಕಿನಲ್ಲಿ ಸುಮಾರು 30 ಅಡಿ ಅಂತರದಲ್ಲಿ ಇತ್ತು. 268 ಕೆ.ಜಿ ಮಾಂಸ ಸ್ವಲ್ಪ ಪೀಸ್ ಮಾಡಿದ್ದರು ಉಳಿದ ಭಾಗ ಹಾಗೇಯೆ ಇತ್ತು. ಅದನ್ನು ಸ್ಥಳದಲ್ಲೇ Electronic ತೂಕದ ಯಂತ್ರದ ಮೂಲಕ ಅಳೆದಿರುತ್ತೇವೆ. ಅದನ್ನು ಚಾಸಾ-9 ರವರು ತರೆಸಿರುತ್ತಾರೆ. ಪಂಚನಾಮೆಯನ್ನು ಚಾಸಾ-9 ರವರು ಬರೆದಿರುತ್ತಾರೆ.

ಚಾಸಾ-1 ರವರ ಮೂಲಕ ದೂರನ್ನು ಕಳುಹಿಸಿ ಕೊಟ್ಟಿರುತ್ತಾರೆ. ಚಾಸಾ-9 ರವರು ಸುಮಾರು 12 ಗಂಟೆಗೆ ದೂರನ್ನು ಕಳುಹಿಸಿಕೊಟ್ಟಿರುತ್ತಾರೆ. ಚಾಸಾ-1 ರವರು ಪರಿಚಯಸ್ತರ ಬೈಕ್ ನ ಮೂಲಕ ಹೋಗಿರುತ್ತಾರೆ. ಘಟನಾ ಸ್ಥಳದಲ್ಲಿ ಜನರು ಇರಲ್ಲಿಲ್ಲ. ಘಟನಾ ಸ್ಥಳದಿಂದ ಠಾಣೆ ಸುಮಾರು 15 ಕಿ.ಮಿ. ಇರುತ್ತದೆ. ಅಲ್ಲಿಗೆ ಹೋಗಲು 20 ನಿಮಿಷ ಬೇಕಾಗುತ್ತದೆ. ನಾನು ಪಂಚನಾಮೆಗೆ ಸಹಿ ಮಾಡಿಲ್ಲ. ಪಂಚನಾಮೆಗೆ ಚಾಸಾ-3 ಮತ್ತು 4, ಮತ್ತು ಚಾಸಾ-9 ರವರು ಸಹಿ ಮಾಡಿರುತ್ತಾರೆ. ಪ್ರ.ವ.ವ. ಆದ ನಂತರ ಚಾಸಾ-9 ರವರು ಪಂಚರನ್ನು ಕರೆಸಿರುತ್ತಾರೆ. ಸ್ಥಳಕ್ಕೆ ಪಶು ವೈದ್ಯಾಧಿಕಾರಿಗಳು ಬಂದಿರುತ್ತಾರೆ. ಅರವನ್ನು  ಚಾಸಾ-9 ರವರು ಕರೆಸಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ಸ್ಥಳದಲ್ಲಿ ದನದ ಚರ್ಮ, ಮಾಂಸ, ತಲೆ ಮತ್ತು ಕಾಲುಗಳು ಇದ್ದವು ಅದು ಕಪ್ಪು ಬಣ್ಣದ ಚರ್ಮ ಆಗಿತ್ತು. ಅವುಗಳನ್ನು ಅಮಾನತ್ತು ಪಡೆಸಿಕೊಂಡಿರುತ್ತೇವೆ. ಪಶು ವೈದ್ಯಾಧಿಕಾರಿಗಳು ಹಳ್ಳದ ಬಳಿ ಇದ್ದ ಮಾಂಸ, ಬೈಕ್ ನಲ್ಲಿದ ಮಾಂಸ ಮತ್ತು ರೂಮ್ ನಲ್ಲಿ ಇದ್ದ ಮಾಂಸವನ್ನು ಪ್ರತ್ಯೇಕ ವಾಗಿ ಮೂರರಲ್ಲೂ ತಲಾ ಒಂದು ತುಂಡನ್ನು ಪ್ಲಾಸ್ಟಿಕ್ ಕವರನಲ್ಲಿ ಹಾಕಿಕೊಂಡು ಬಿಳಿ ಬಣ್ಣದ ಬಟ್ಟೆಯಲ್ಲಿ ಸುತ್ತಿ ವಶಪಡಿಸಿಕೊಂಡರು. ಅದಕ್ಕೆ ಅರಗು ಹಾಕಿ ಎಸ್ ಅಕ್ಷರದಿಂದ ಸೀಲ್ ಮಾಡಿರುತ್ತಾರೆ.  ನಾವು ಸದರಿ ದಿನ ಸ್ಥಳಕ್ಕೆ ಹೋಗಿಲ್ಲ, ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ.  ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮುಮಾ ಗಳು ಬೇರೆ ಪ್ರಕರಣದಲ್ಲಿ ಠಾಣೆಯಲ್ಲಿ

ಇದ್ದ ಪ್ಯಾಕೇಟ್ ಗಳನ್ನು ಈ ಪ್ರಕರಣಕ್ಕೆ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಕ್ಕೋಸ್ಕರ ದಾಖಲು ಮಾಡಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

ಪ್ರಧಾನ **ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**